Presented on : 04-05-2021
Registered on : 04-05-2021
Decided on : 17-06-2026
Duration : 05 years, 01 months, 13 days

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ರೋಣ.**
**:ಉಪಸ್ಥಿತರು:**
**ಶ್ರೀ ಹುಲುಗಪ್ಪ ಡಿ. ಬಿ .ಎ., ಎಲ್. ಎಲ್. ಬಿ .,**
ಪ್ರದಾನ ದಿವಾಣಿ ನ್ಯಾಯಾಧೀಶರು
**ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ರೋಣ.**

**2026** ನೇ ಇಸವಿ ಜೂನ್ ತಿಂಗಳ **17** ನೇ ದಿನ

ಸಿ.ಸಿ.ನಂಃ **658/2021**

ಫಿರ್ಯಾದಿದಾರರು:

1. ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ,
ಗಜೇಂದ್ರಗಡ ಪೋಲಿಸ್ ಠಾಣೆ,
(ಪ್ರತಿನಿಧಿಸುವವರು ಸ.ಸ.ಅ.)

ಃವಿರುದ್ಧಃ

ಆಪಾದಿತಃ

ಗಿರೀಶ ತಂದೆ ರಾಮಚಂದ್ರ ಹುಲಕುಂದ,
ವಯಸ್ಸು: 46 ವರ್ಷ, ಉಃ ಎಸ್.ಡಿ.ಸಿ,
ಸಾಃ ಗೋಕುಲ್ ರೋಡ್, ಸಿಲ್ವರ್ ಟೌನ್,
ಹುಬ್ಬಳ್ಳಿ, ತಾಃ ಹುಬ್ಬಳ್ಳಿ, ಜಿಃಧಾರವಾಡ.

====

| | | |
|---|---|---|
| 1. | ಅಪರಾಧ ದಿನಾಂಕ | 06.05.2020 |
| 2. | ಅಪರಾಧ ವರದಿಯ ದಿನಾಂಕ | 07.05.2020 |
| 3. | ಆರೋಪಿಯ ದಸ್ತಗಿರಿಯ ದಿನಾಂಕ | ----- |
| 4. | ಫಿರ್ಯಾದಿಯ ಹೆಸರು | ಅಶೋಕ ತಂದೆ ಈಶ್ವರಪ್ಪ ಕೆಂಚಿ |

| | | |
|---|---|---|
| 5. | ಸಾಕ್ಷ್ಯ ಪ್ರಾರಂಭದ ದಿನಾಂಕ | 03.01.2024 |
| 6. | ಸಾಕ್ಷ್ಯ ಮುಕ್ತಾಯವಾದ ದಿನಾಂಕ | 13.05.2026 |
| 7. | ದೂರಿದ ಅಪರಾಧ | ಭಾರತೀಯ ದಂಡ ಸಂಹಿತೆ ಕಲಂ. ಕಲಂ.504, 506. |
| 8. | ನ್ಯಾಯಾಧೀಶರ ಅಭಿಪ್ರಾಯ | ತಪ್ಪಿತಸ್ಥರಲ್ಲ |
| 9. | ಫಿರ್ಯಾದಿಯನ್ನು ಪ್ರತಿನಿಧಿಸಿದವರು | ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು. |
| 10. | ಆರೋಪಿತರನ್ನು ಪ್ರತಿನಿಧಿಸಿದವರು | ಶ್ರೀ.ಆರ್ .ಐ .ಬಿ. ವಕೀಲರು. |

**:ತೀರ್ಪು:**

ಆರಕ್ಷಕ ಉಪನಿರೀಕ್ಷಕರು, ಗಜೇಂದ್ರಗಡ ಪೋಲಿಸ್ ಠಾಣೆ, ಇವರು ಆರೋಪಿತರ ವಿರುದ್ಧ ಭಾ.ದ.ಸಂ. ಕಲಂ.504, 506 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ದೋಷಾರೋಪಣೆ ಪತ್ರ ಸಲ್ಲಿಸಿರುತ್ತಾರೆ.

**2.** ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತದೆ :

ದಿನಾಂಕಃ 06.05.2020 ರಂದು ರಾತ್ರಿ 9-30 ಗಂಟೆಯ ಸುಮಾರಿಗೆ ಗಜೇಂದ್ರಗಡ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಡುವ ಗಜೇಂದ್ರಗಡ ಶಹರದ ಗಂಜಿಪೇಟೆ, ಬನಶಂಕರಿ ದೇವಸ್ಥಾನದ ಹತ್ತಿರ ಚಾಸಾ-1 ನೇದವರು ತಮ್ಮ ವಾಸದ ಮನೆಯಲ್ಲಿ ಇದ್ದಾಗ ಆರೋಪಿತನು ಚಾಸಾ-1 ನೇದವರ ಸಂಬಂಧಿಕಳಿಗೆ ಮದುವೆಯಾಗಿ ಸರಿಯಾಗಿ ಬಾಳ್ವೆ ಮಾಡಿಕೊಂಡು ಹೋಗದೆ ಇದ್ದುದ್ದರಿಂದ ಚಾಸಾ-1 ನೇದವರು ಆರೋಪಿತನಿಗೆ ಬುದ್ದಿಮಾತು ಹೇಳಿದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಚಾಸಾ-1 ನೇದವರ ಮೊಬೈಲಗೆ ನೀನು ನಾಯಿ ಅದಿ, ಲೇ ನನಗಾ ಚಕ್ಕಾ ಅಂತೀಯಾ ನಿನ್ನ ಒಂದು ಕೈ ನೋಡಿಯೇ

ಬಿಡುತ್ತೇನೆ ದಮ್ ಇದ್ರೆ ಬಾ ಅಂತಾ ಅವಾಚ್ಯವಾಗಿ ಬೈದು, ನಿನ್ನ ಜೀವಂತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆಂದು ಆಪಾದಿಸಿರುತ್ತಾರೆ.

**3.** ಚಾ.ಸಾ.1 – ಅಶೋಕ ತಂದೆ ಈಶ್ವರಪ್ಪ ಕೆಂಚಿ ಇವರು ಕೊಟ್ಟ ದೂರಿನ ಆಧಾರದ ಮೇಲೆ ಆರೋಪಿಯ ವಿರುದ್ಧ ಭಾ.ದ.ಸಂ.ಕಲಂ.504, 506 ರ ಅಡಿಯಲ್ಲಿ ಅಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತಾರೆ.

**4.** ಆನಂತರ ತನಿಖಾಧಿಕಾರಿಗಳು ತನಿಖೆಯನ್ನು ಪೂರ್ಣಗೊಳಿಸಿ ಭಾ.ದಂ.ಸಂ.ಕಲಂ.504, 506 ರ ಅಡಿಯಲ್ಲಿ ಆರೋಪಿತರು ಅಪರಾಧವೆಸಗಿರುತ್ತಾರೆಂದು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ. ತದನಂತರ ದೋಷಾರೋಪಣೆ ಪತ್ರದಲ್ಲಿನ ದಾಖಲಾತಿಗಳನ್ನು ಪರಿಶೀಲಿಸಿ ಸದರಿ ಅಪರಾಧಗಳ ಸಂಜ್ಞೆಯನ್ನು ನ್ಯಾಯಾಲಯ ತೆಗೆದುಕೊಂಡಿರುತ್ತದೆ. ಆರೋಪಿಯು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದು, ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 207ರ ಅಡಿಯಲ್ಲಿ ಅಭಿಯೋಜನೆ ದಾಖಲಾತಿಗಳನ್ನು ಆರೋಪಿತರಿಗೆ ಪೂರೈಸಿ, ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ಎರಡೂ ಪಕ್ಷಗಾರರ ವಾದವನ್ನು ಆಲಿಸಿ, ಆರೋಪಿತನನ್ನು ಬಿಡುಗಡೆಗೊಳಿಸಲು ಯಾವುದೇ ಸಕಾರಣಗಳು ಕಂಡುಬರದ ಕಾರಣ ದೋಷಾರೋಪಣೆಯನ್ನು ರಚಿಸಿ ಆರೋಪಿಗೆ ಓದಿ ಹೇಳಲಾಗಿ ಅವರು ಸದರಿ ದೋಷಾರೋಪಣೆಯನ್ನು ಒಪ್ಪಿಕೊಂಡಿರುವುದಿಲ್ಲ, ಅಲ್ಲದೆ ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**5.** ಆದ್ದರಿಂದ ಸದರಿ ದೋಷಾರೋಪಣೆಗಳನ್ನು ಸಾಭೀತುಪಡಿಸಲು ಅಭಿಯೋಗವು ಆರೋಪ ಪಟ್ಟಿಯಲ್ಲಿ ಒಟ್ಟು 10 ಜನ ಸಾಕ್ಷಿದಾರರನ್ನು ಕಾಣಿಸಿದ್ದು, ಆ ಪೈಕಿ ಐದು ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತದೆ. ನಿ.ಪಿ.1 ರಿಂದ ನಿ.ಪಿ.7 ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿರುತ್ತದೆ. ಈ ಪ್ರಕರಣದ ವಿಚಾರಣಾ ಹಂತದಲ್ಲಿ ಚಾಸಾ-1- ದೂರುದಾರರು ದಿನಾಂಕ 13.05.2021 ರಂದು ಮೃತಪಟ್ಟಿರುವುದಾಗಿ ವರದಿಯಾಗಿದ್ದು, ಅವರ ಮರಣ ಉತಾರೆಯ ಪ್ರತಿಯನ್ನು ಸಹ ಹಾಜರುಪಡಿಸಲಾಗಿರುತ್ತದೆ. ಆನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಅಭಿಯೋಜನಾ ಸಾಕ್ಷಿದಾರರ ಹೇಳಿಕೆಯಲ್ಲಿನ ದೋಷಾರೋಪಣೆಗೊಳಪಡಿಸಿದ ಅಂಶಗಳನ್ನು ಆರೋಪಿತನಿಗೆ ತಿಳಿಸಿದ್ದು, ಅವರು ಅವುಗಳನ್ನು ಅಲ್ಲಗಳೆದಿರುತ್ತಾರೆ. ಅಲ್ಲದೆ ಅವರ ಪರವಾಗಿ ಪ್ರತಿರಕ್ಷೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**6.** ಎರಡೂ ಪಕ್ಷದವರ ವಾದವನ್ನು ಆಲಿಸಿ ನ್ಯಾಯಾಲಯದ ಮುಂದಿರುವ ಎಲ್ಲಾ ದಾಖಲಾತಿಗಳನ್ನೂ ಕೂಲಂಕುಷವಾಗಿ ಪರಿಶೀಲಿಸಿದ ನಂತರ ನ್ಯಾಯಾಲಯದ ತೀರ್ಮಾನಕ್ಕಾಗಿ ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

**:**ಅಂಶಗಳು**:**

1) ದಿನಾಂಕಃ 06.05.2020 ರಂದು ರಾತ್ರಿ 09.30 ಗಂಟೆಯ ಸಮಯದಲ್ಲಿ ಗಜೇಂದ್ರಗಡ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಡುವ ಗಜೇಂದ್ರಗಡ ಪಟ್ಟಣದ ಗಂಜಿಪೇಟೆ, ಬನಶಂಕರಿ ದೇವಸ್ಥಾನದ ಹತ್ತಿರ ಚಾಸಾ-1 ರವರು ಮನೆಯಲ್ಲಿದ್ದಾಗ ಆರೋಪಿತನು ಚಾಸಾ-1 ರವರ

ಮೊಬೈಲಗೆ "ನೀನು ನಾಯಿ ಅದಿ, ಲೇ ನನಗಾ ಚಕ್ಕಾ ಅಂತೀಯಾ ನಿನ್ನ ಒಂದು ಕೈ ನೋಡಿಯೇ ಬಿಡುತ್ತೇನೆ ದಮ್ ಇದ್ರೆ ಬಾ" ಅಂತಾ ಅವಾಚ್ಯವಾಗಿ ಬೈದು, ಅವರಿಗೆ ಉದ್ದೇಶ ಪೂರ್ವಕವಾಗಿ ಅವಮಾನಮಾಡಿ, ಆ ಮೂಲಕ ಅವರಿಗೆ ಉದ್ರೇಕವನ್ನುಂಟುಮಾಡಿ, ಆ ಉದ್ರೇಕದಿಂದ ಅವರು ಶಾಂತಿ ಭಂಗ ಮಾಡುವ ಸಂಭವವಿದೆಯೆಂದು ತಿಳಿದು ಸಹ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಆ ಮೂಲಕ ಆರೋಪಿತನು ಭಾ.ದಂ.ಸಂ. ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತಾರೆ ಎಂಬುದನ್ನು ನಿಸ್ಸಂಶಯವಾಗಿ ರುಜುವಾತುಪಡಿಸಿದೆಯೇ?

2) ಅಭಿಯೋಜನೆಯು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಅಪಕೃತ್ಯ ಮಾಡುವ ಸಮಾನ ಉದ್ದೇಶದಿಂದ, ಆರೋಪಿತನು ಚಾಸಾ-1 ರವರಿಗೆ ನಿನ್ನ ಜೀವಂತ ಬಿಡುವುದಿಲ್ಲ ಅಂತಾ ಜೀವಬೆದರಿಕೆ ಹಾಕಿ ಅವರಿಗೆ ಭೀತಿ ಹುಟ್ಟಿಸಿದ್ದು, ಆ ಮೂಲಕ ಆರೋಪಿತರು ಭಾ.ದಂ.ಸಂ. ಕಲಂ 506 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತಾರೆ ಎಂಬುದನ್ನು ನಿಸ್ಸಂಶಯವಾಗಿ ರುಜುವಾತುಪಡಿಸಿದೆಯೇ?

3) ಏನು ಆದೇಶ?

**7.** ಮೇಲಿನ ಅಂಶಗಳಿಗೆ ನ್ಯಾಯಾಲಯದ ತೀರ್ಮಾನ ಈ ಕೆಳಗಿನಂತೆ ಇರುತ್ತದೆ.

| | | |
|---|---|---|
| ಅಂಶಃ 1 ಮತ್ತು 2 | : | ನಕಾರಾತ್ಮಕವಾಗಿ |
| ಅಂಶಃ 3 | : | ಅಂತಿಮ ಆದೇಶದ ಪ್ರಕಾರ ಈ ಕೆಳಕಂಡಂತೆ. |

**:ಕಾರಣಗಳು:**

**8.** ಅಂಶ **1 ಮತ್ತು 2:**- ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸಾಕ್ಷಿಗಳ ಮತ್ತು ವಸ್ತು ಸ್ಥಿತಿಗಳ ಪುನರಾವರ್ತನೆಯನ್ನು ತಡೆಯುವುದಕ್ಕೋಸ್ಕರ ಅವುಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**9.** ಅಭಿಯೋಜನೆಯ ಪ್ರಕಾರ ಚಾ.ಸಾ.3 ಮತ್ತು ಚಾ.ಸಾ.2 ರವರು ನಿ.ಪಿ.1 ಗುನ್ನೆ ಜಾಗೆಯ ಪಂಚರಿದ್ದು, ಫ್ರಾ.ಸಾ.1 ಮತ್ತು ಫ್ರಾಸಾ.2 ಎಂದು ವಿಚಾರಣೆಗೆ ಒಳಪಟ್ಟಿರುವರು. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿಸುಮಾರು 3-4 ವರ್ಷಗಳ ಹಿಂದೆ ಪೋಲೀಸರ ಕೋರಿಕೆಯ ಮೇರೆಗೆ ನಿಪಿ.1 ಪಂಚನಾಮೆಗೆ ಸಹಿ ಮಾಡಿದ್ದು, ನಿಪಿಃ1 ರಲ್ಲಿ ಬರೆದ ವಿಚಾರ ಗೊತ್ತಿಲಾ ಮತ್ತು ಅವರ ಜೊತೆ ಬೇರೆ ಯಾರು ನಿಪಿ 1 ಕ್ಕೆ ಸಹಿ ಮಾಡಿದರು ಎಂದು ಅವರಿಗೆ ಗೊತ್ತಿಲ್ಲ ಹಾಗೂ ಚಾಸಾ-1 ರವರ ಪರಿಚಯ ಇಲ್ಲ ಎಂದು ನುಡಿದಿರುವರು. ಹೀಗೆ ತಮ್ಮ ಸಾಕ್ಷ್ಯದಲ್ಲಿ ಸದರಿ ಸಾಕ್ಷಿದಾರರು ನಿ.ಪಿ.1 ಪಂಚನಾಮೆಯ ಸಂಗತಿಗಳಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**10.** ಚಾ.ಸಾ.4 ರವರು ಕೇಳಿಕೆ ಸಾಕ್ಷಿದಾರರಿದು, ಫ್ರಾ.ಸಾ.3 ಎಂದು ವಿಚಾರಣೆಗೆ ಒಳಪಟ್ಟಿರುವರು. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಅವರು ಯಾವುದೇ ಘಟನೆಯನ್ನು ನೋಡಿಲ್ಲ, ಚಾಸಾ-1 ಇವರ ಜೊತೆ ಅವರು ಪೋಲೀಸ್ ಠಾಣೆಗೆ ಹೋಗಿದ್ದು, ಆ ಸಮಯದಲ್ಲಿ ಅವರನ್ನು ಸಾಕ್ಷಿಯಾಗಿ ಮಾಡಿದ್ದು, ಚಾಸಾ-1 ಅವರ ಸ್ನೇಹಿತನ ತಂದೆಯಾಗಿದ್ದು ಚಾಸಾ-1 ರವರಿಗೆ ಮೂರು ಜನ ಗಂಡು

ಮಕ್ಕಳು ಇದು ಈಗ ತೀರಿಕೊಂಡಿದ್ದು, ಅವರು ಇದೇ ಮೊದಲ ಬಾರಿಗೆ ಆರೋಪಿಯನ್ನು ನೋಡುತ್ತಿರುವುದಾಗಿ ನುಡಿದಿರುವರು.

**11.** ಗಜೇಂದ್ರಗಡ ಪೋಲಿಸ್ ಠಾಣೆಯ ಆಗಿನ ಎ ಎಸ್ ಐ ಆದ ಚಾ.ಸಾ.11 ರವರು ಪ್ರಾ.ಸಾ.11 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 07/05/2020 ರಂದು ಅವರು ಎಸ್ ಹೆಚ್ ಓ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 2.30 ಗಂಟೆ ಸುಮಾರಿಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಗಣಕೀಕೃತ ದೂರು ನೀಡಿದ್ದು ನಂತರ ದಿಃ08.05.2020 ರಂದು ಎನ್.ಸಿ ನಂ.28/2020 ರಲ್ಲಿ ಮಾನ್ಯ ನ್ಯಾಯಾಲಯದಿಂದ ಅನುಮತಿ ಬಂದ ನಂತರ ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆಃ 76/2020 ರಂತೆ ಭಾ.ದಂ.ಸ.ಕಲಂ.504 ಮತ್ತು 506 ರಡಿಯಲ್ಲಿ ಪ್ರಕರಣ ದಾಖಲಿಸಿ, ನಂತರ ಮೂಲ ದೂರು ಮತ್ತು ಎಫ್.ಐ.ಆರ್ ಅನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ನಂತರ ಅದೇ ದಿನ ಮುಂಜಾನೆ 9.30 ಗಂಟೆಯಿಂದ 10.30 ಗಂಟೆಯವರೆಗೆ ಚಾಸಾ-1 ರವರು ತೋರಿಸಿದಂತೆ ಘಟನಾ ಸ್ಥಳದಲ್ಲಿದ್ದ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಜರುಗಿಸಿ ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-10 ರವರಿಗೆ ಹಸ್ತಾಂತರಿಸಿರುವುದಾಗಿ ನುಡಿದಿರುವರು.

**12.** ತನಿಖಾಧಿಕಾರಿಗಳಾದ ಪ್ರಾ.ಸಾ.5 ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 08.05.2020 ರಂದು ಹಿಂದಿನ ತನಿಖಾಧಿಕಾರಿಗಳಾದ ಚಾ.ಸಾ.9 ರವರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದುಕೊಂಡು ಪರಿಶೀಲಿಸಿ ನಂತರ

ದಿಃ12.05.2020 ರಂದು ಚಾಸಾ.6 ರವರ ಮುಖಾಂತರ ಭಾ.ದಂ.ಪ್ರ ಸಂಹಿತೆ ಕಲಂ.41 ಎ ರಡಿಯಲ್ಲಿ ಆರೋಪಿತನಿಗೆ ವಿಚಾರಣೆಗೆ ಹಾಜರಾಗಲು ನೋಟೀಸು ಜಾರಿ ಮಾಡಿದ್ದು, ಆದರೆ ಆರೋಪಿತನು ವಿಚಾರಣೆಗೆ ಹಾಜರಾಗಿರುವುದಿಲ್ಲ, ನಂತರ ಪುನಃ ಚಾಸಾ.6 ರವರ ಮುಖಾಂತರ ದಿಃ26.08.2020 ರಂದು ಭಾ.ದಂ.ಪ್ರ.ಸಂಹಿತೆ ಕಲಂ.41 ಎ ರಡಿಯಲ್ಲಿ ಆರೋಪಿತನಿಗೆ ವಿಚಾರಣೆಗೆ ಹಾಜರಾಲು ನೋಟೀಸು ಜಾರಿ ಮಾಡಿ ನಂತರ ದಿನಾಂಕಃ 27.08.2020 ರಂದು ಚಾಸಾ.6 ರವರು ನೋಟೀಸು ಜಾರಿ ಮಾಡಿದ ಕುರಿತು ವರದಿ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡು ನಂತರ ದಿಃ31.08.2020 ರಂದು ಚಾಸಾ.7 ರವರ ಮುಖಾಂತರ ಭಾ.ದಂ.ಪ್ರ ಸಂಹಿತೆ ಕಲಂ. 41 ಎ ರಡಿಯಲ್ಲಿ ಆರೋಪಿತನಿಗೆ ವಿಚಾರಣೆಗೆ ಹಾಜರಾಗಲು ನೋಟೀಸು ಜಾರಿ ಮಾಡಿ ನಂತರ ಅದೇ ದಿನ ಚಾಸಾ.7 ರವರು ನೋಟೀಸು ಜಾರಿ ಮಾಡಿದ ಕುರಿತು ವರದಿ ನೀಡಿದ ನಂತರ ಅದನ್ನು ಕಡತಕ್ಕೆ ಅಳವಡಿಸಿಕೊಂಡಿದ್ದು, ಮೂರು ಬಾರಿ ನೋಟೀಸು ನೀಡಿದರು ಆರೋಪಿತನು ವಿಚಾರಣೆಗೆ ಹಾಜರಾಗಿರುವುದಿಲ್ಲ ನಂತರ ದಿಃ02.11.2020 ರಂದು ಚಾಸಾ.4 ಮತ್ತು ಚಾಸಾ.5 ರವರ ಹೇಳಿಕೆ ಪಡೆದುಕೊಂಡ ನಂತರ ಆರೋಪಿತನ ವಿರುದ್ಧ ಸಾಕಷ್ಟು ಪುರಾವೆಗಳು ಇದ್ದಿದ್ದರಿಂದ ದಿಃ 17.03.2021 ರಂದು ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುವುದಾಗಿ ನುಡಿದಿರುವವರು.

**13.** ಪ್ರಾ.ಸಾ.1 ರಿಂದ 3 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸದರಿ ಸಾಕ್ಷಿದಾರರು ಅಭಿಯೋಜನ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ

ನುಡಿದಿದ್ದು, ಸದರಿ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಗುರಿಪಡಿಸಿದ್ದರೂ ಅವರಿಂದ ಅಭಿಯೋಜನಾ ಪ್ರಕರಣಕ್ಕೆ ಪೂರಕವಾಗಿ ಹೇಳಿಕೆಯನ್ನು ಪಡೆಯುವಲ್ಲಿ ವಿಫಲವಾದ ಕಾರಣ ಆರೋಪಿತನು ಮತ್ತು ಫಿರ್ಯಾದುದಾರರ ಮಧ್ಯೆ ಅಭಿಯೋಜನೆಯು ಆಪಾದಿಸಿರುವ ರೀತಿಯಲ್ಲಿ ಕೃತ್ಯ ನಡೆದಿರುವ ಬಗ್ಗೆ ನ್ಯಾಯಾಲಯಕ್ಕೆ ಸಂಶಯ ಉಂಟಾಗುತ್ತದೆ. ಈ ಸಂಶಯದ ಲಾಭವು ಸಂಪೂರ್ಣವಾಗಿ ಆರೋಪಿತನಿಗೆ ಸಲ್ಲತಕ್ಕದ್ದು ಹಾಗೂ ದಿನಾಂಕಃ 13.05.2021 ರಂದು ಫಿರ್ಯಾದಿದಾರರು ಮೃತಪಟ್ಟಿರುವುದಾಗಿ ವರದಿಯಾಗಿದ್ದು, ಹೀಗೆ ಅಭಿಯೋಜನೆಯು ಆಪಾದಿಸಿರುವ ಘಟನೆ ನಡೆದಿದೆ ಎಂಬ ಅಂಶಗಳನ್ನು ಸಾಬೀತು ಮಾಡುವಲ್ಲಿ ಮತ್ತು ಆರೋಪಿತನ ಮೇಲೆ ಹೊರಿಸಲಾಗಿರುವ ಆಪಾದನೆಗಳನ್ನು ಪೂರಕವಾದಂತಹ ಬಲವಾದ ಸಾಕ್ಷಿಗಳಿಂದ ಮತ್ತು ಯುಕ್ತ ನಿಸ್ಸಂಶಯತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಮುಂದುವರೆದು ತನಿಖಾಧಿಕಾರಿಗಳಾದ ಪ್ರಾಸಾ-4 ಮತ್ತು ಪ್ರಾಸಾ-5 ರವರು ಅಭಿಯೋಜನ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದರೂ ಸಹ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಸದರಿ ಸಾಕ್ಷಿದಾರರ ಸಾಕ್ಷ್ಯವು ಅಭಿಯೋಜನೆಯು ಆರೋಪಿತನ ಮೇಲೆ ಹೋರಿಸಿದ ಆಪಾದನೆಯನ್ನು ರುಜುವಾತುಪಡಿಸಲು ಸಾಕಾಗುವುದಿಲ್ಲ.

**14.** ಹೀಗೆ ಮೇಲೆ ಚರ್ಚಿಸಿದಂತಹ ಎಲ್ಲಾ ಕಾರಣಗಳಿಂದಾಗಿ ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಲಿಖಿತ ಮತ್ತು ಮೌಖಿಕ ಸಾಕ್ಷ್ಯಗಳನ್ನು

ಪರಿಶೀಲಿಸಲಾಗಿ, ಅಭಿಯೋಜನೆಯು ಆರೋಪಿತನ ಮೇಲೆ ಹೊರಿಸಲಾದ ಆಪಾದನೆಯನ್ನು ರುಜುವಾತುಪಡಿಸಲು ಪೂರಕವಾದಂತಹ ಬಲವಾದ ಸಾಕ್ಷಿಗಳಿಂದ ಮತ್ತು ಯುಕ್ತ ನಿಸ್ಸಂಶಯತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ ಎಂದು ಅಭಿಪ್ರಾಯಪಡುತ್ತಾ, ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಅಂಶ 1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**15.** ಅಂಶ **3:**- ಈ ಮೇಲೆ ವಿವರಿಸಿದ ಕಾರಣಗಳಿಗಾಗಿ ಮತ್ತು ಅಂಶ 1 ಮತ್ತು 2 ರ ಮೇಲೆ ನೀಡಿದ ನಿರ್ಣಯದಿಂದ ನ್ಯಾಯಾಲಯದ ಆದೇಶ ಈ ಕೆಳಗಿನಂತೆ......

**:ಆದೇಶ:**

ದಂಡ ಪ್ರಕ್ರಿಯಾ ಸಂಹಿತೆಯ ಕಲಂ.248(1) ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿತನನ್ನು ಭಾ.ದ.ಸಂ.ಕಲಂ. 504, 506 ರ ಅಡಿಯಲ್ಲಿ ಮಾಡಿರುವ ಆಪಾದನೆಗಳಿಂದ ನಿರ್ದೋಷಿ ಎಂದು ಘೋಷಿಸಿ ಸದರಿ ಆರೋಪಗಳಿಂದ ದೋಷಮುಕ್ತನನ್ನಾಗಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತನು ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ಆರು ತಿಂಗಳ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಮೌಖಿಕವಾಗಿ ನೀಡಿದ ಆದೇಶವನ್ನು ಅವರಿಂದಲೇ ಬೆರಳಚ್ಚು ಮಾಡಿದ ನಂತರ ನನ್ನಿಂದ ಸೂಕ್ತವಾಗಿ ತಿದ್ದುಪಡಿಯಾದ ನಂತರ ದಿನಾಂಕ 17 ನೇ ಜೂನ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).

Sd/-
**(**ಹುಲುಗಪ್ಪ ಡಿ**.)**
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ರೋಣ.

**:ಅನುಬಂಧ:**

ಫಿರ್ಯಾದಿ ಪರ ಸಾಕ್ಷಿಗಳುಃ

ಪಿ.ಡಬ್ಲೂಃ

1. ಹನಮಂತ ನಿಂಗಪ್ಪ ತಂಗಡಗಿ
2. ರಮೇಶ ನಾಗಪ್ಪ ಮಡಿವಾಳರ
3. ಮಂಜುನಾಥ ಮಾರುತಿ ಚಿತ್ರಗಾರ
4. ಸುರೇಶ ಹನಮಂತಪ್ಪ ಗೊಂದಿ
5. ಗುರುಶಾಂತ ಸಾಹೇಬಗೌಡ ದಾಶ್ಯಾಳ

ಆಪಾದಿತರ ಪರ ಸಾಕ್ಷಿಗಳುಃ ಇಲ್ಲ.

ಫಿರ್ಯಾದಿ ಪರ ಗುರುತಿಸಲಾದ ದಾಖಲೆಗಳುಃ

ನಿ.ಪಿ.

| | |
|---|---|
| 1. | ಪಂಚನಾಮೆ |
| 1.ಎ.ಬಿ.ಸಿ | ಫ್ರಾ.ಸಾ.2 ಮತ್ತು 4 ರವರ ಸಹಿಗಳು |
| 2. | ಫ್ರಾ.ಸಾ.3 ರವರ ಒಪ್ಪದ ಹೇಳಿಕೆ |
| 3. | ಪ್ರ.ವ.ವರದಿ |
| 3.ಎ. | ಫ್ರಾ.ಸಾ.4 ರವರ ಸಹಿ |
| 4. | ದೂರು |
| 4.ಎ.ಬಿ. | ಫ್ರಾ.ಸಾ.4 ರವರ ಸಹಿಗಳು |
| 5 ರಿಂದ 7 | ನೋಟೀಸುಗಳು |
| 5.ಎ,6.ಎ,7 ಎ | ಫ್ರಾ.ಸಾ.5 ರವರ ಸಹಿಗಳು |

ಆಪಾದಿತರ ಪರ ಗುರುತಿಸಲಾದ ದಾಖಲೆಗಳುಃ ಇಲ್ಲ.

ಫಿರ್ಯಾದಿ ಪರ ಮುದ್ದೆ ಮಾಲುಗಳುಃ ಇಲ್ಲ.

Sd/-
**(ಹುಲುಗಪ್ಪ ಡಿ.)**
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ರೋಣ.